ಬಿತ್ತು. ಒಳಹೊಕ್ಕು ವಿಚಾರಿಸಿದಾಗ ನರ್ಸರಿಯ ಒಡತಿ ಲಿಂಡಾಳಿಗೆ ಗಿಡಗಳ ವಿಲೇವಾರಿಯ ಜತೆ ಕಚೇರಿಯ ಕೆಲವು ವ್ಯವಹಾರಗಳನ್ನು ನೋಡಿಕೊಳ್ಳಲು ತುರ್ತಾಗಿ ಸಹಾಯ ಬೇಕಿರುವುದು ಗೊತ್ತಾಯಿತು. ಮಾತುಕತೆ ಮುಂದುವರೆದು ಮರುದಿನವೇ ಜ್ಯೋತ್ಸ್ನಾಳ ವಿಳಾಸದ ಪುರಾವೆ, ಪಾಸ್ಪೋರ್ಟ್ ತರಿಸಿ ನೋಡಿ ಕೆಲಸ ಖಾಯಂ ಮಾಡಿದಳು ಲಿಂಡಾ. ಆ ರಾತ್ರಿ ಹರೀಶನಿಗೆ ಜ್ಯೋತ್ಸ್ನಾ ವಿಷಯ ತಿಳಿಸಿದಾಗ 'ಒಳ್ಳೆಯದೇ ಬಿಡು' ಎಂದು ಚುಟುಕಾಗಿ ಹೇಳಿ ಮುಗಿಸಿದ. ಅಂದು ರಾತ್ರಿ ಊಟಕ್ಕೆ ಶ್ಯಾವಿಗೆ ಪಾಯಸ ಮಾಡಿದ್ದಳು.

ಮರುತಿಂಗಳಿನಿಂದ ಲಿಂಡಾ ಸಂಬಳ ಕೊಡತೊಡಗಿದಳು. ಜ್ಯೋತ್ಸ್ನಾಗೆ ಇದ್ದುದರಲ್ಲೇ ಸಮಾಧಾನದ ದಿನಗಳವು. ವೀಕೆಂಡ್ ಬಂತೆಂದರೆ ಹರೀಶ ಒಂದರ ಮೇಲೊಂದು ವೆಬ್‌ಸಿರೀಸ್ ಚಚ್ಚುತ್ತಿದ್ದ. ಅಪ್ಪಅಮ್ಮ, ಚಿಕ್ಕಮ್ಮಂದಿರಿಗೆ ಕುಶಲೋಪರಿಯ ಫೋನ್ ಮಾಡಿ ಅವಳ ವಾರಾಂತ್ಯ ಕಳೆಯುತ್ತಿತ್ತು. ಊರಿನಲ್ಲಿ ನಡೆಯುತ್ತಿದ್ದ ಸುಖಕರವೂ ಮಂಗಳವೂ ಆದ ವಿಷಯಗಳನ್ನು ಎಳೆದೆಳೆದು ಹೇಳುವ ಅವಳ ಅಪ್ಪ ಬೇಸರದ ರಾಜಕೀಯಗಳನ್ನೂ ಅಷ್ಟೇ ವಿಸ್ತಾರವಾಗಿ ಹೇಳುತ್ತಿದ್ದ. ಅಂತಹ ವಿಷಯಗಳನ್ನು ಕೇಳಿದ ಆಕೆ ಆ ದಿನವೆಲ್ಲ ಊರಿನಲ್ಲಿಯೇ ಇದ್ದಂತೆ ಸಮಾಧಾನಪಡುತ್ತಿದ್ದಳು.

ವಾರದ ದಿನಗಳಲ್ಲಿ ನರ್ಸರಿಯ ಅಡ್ಮಿನ್ ಕೆಲಸವನ್ನು ಕಲಿಯುತ್ತ ಹೋದಂತೆ ಜ್ಯೋತ್ಸ್ನಾಳ ಒಳಗಿನ ದನಿಗೆ ಆಲಾಪದ ವಿಸ್ತಾರ ಸಿಕ್ಕಂತಾಯಿತು. ವರ್ಷ ಕಳೆಯುತ್ತಿದ್ದಂತೆ ಬೇರೆ ಕೆಲಸಕ್ಕೆ ಅರ್ಜಿ ಹಾಕತೊಡಗಿದಳು. ಆಗಲೇ ಅವಳಿಗೆ ಸಿಕ್ಕಿದ್ದು ನೀಲ್.

* * *

ನೀಲ್ ಜ್ಯೋತ್ಸ್ನಾಳ ಮೊದಲ ಭೇಟಿ ಪೂರ್ವನಿಯೋಜಿತವಾಗಿದ್ದರೂ ನಂತರ ಜರುಗಿದ ಘಟನೆಗಳು ದೈವೇಚ್ಛೆಯೇ ಇರಬಹುದಾ ಎನ್ನಬಹುದಾದಷ್ಟು ಅಚ್ಚರಿಯವು. ಇಂಟರ್‌ವ್ಯೂ ಸಂದರ್ಭದಲ್ಲಿ ತನ್ನ ಬಾಯಿಗೆ ಆದಷ್ಟೂ ಕಡಿಮೆ ಕೆಲಸಕೊಟ್ಟ ನೀಲ್ ಜಾಸ್ತಿ ಮಾತನಾಡಿದ್ದು ಹಸಿರು ಕಣ್ಣುಗಳ ಮೂಲಕ ಎನ್ನುವುದು ಜ್ಯೋತ್ಸ್ನಾಳ ಅಭಿಪ್ರಾಯ. ವೆಬ್ ಡಿಸೈನಿಂಗ್ ಕಂಪನಿಯಲ್ಲಿ ಡೈರೆಕ್ಟರ್ ಆಗಿರುವ ನೀಲ್, ಕೊನೆಯಲ್ಲಿ 'ಇಫ್ ಐ ಟೇಕ್ ಯೂ ಆನ್ ಬೋರ್ಡ್, ಯೂ ವಿಲ್ ಹ್ಯಾವ್ ಟು ಬ್ರಿಂಗ್ ಇನ್ ಸಮೋಸಾಸ್ ರೆಗ್ಯೂಲರ್‌ಲಿ' ಎಂದದ್ದು ಎಲ್ಲೂ ಅತಿಶಯವಾಗಿ ಜ್ಯೋತ್ಸ್ನಾಗೆ ಕಾಣಲಿಲ್ಲ. ನೀಲ್ ಕಂಪನಿಯ ಅಕೌಂಟ್ ವಿಭಾಗದಲ್ಲಿ ಅವಳಿಗೆ ಕೆಲಸ ಕೊಟ್ಟ. ಹೊಸತನ್ನು ಕಲಿಯುವ ಹುಮ್ಮಸ್ಸಿನಲ್ಲಿ ಯಾವುದೂ ವಜ್ಜೆಯೆನ್ನಿಸಲಿಲ್ಲ.

ಹೊಸ ಕೆಲಸದಲ್ಲಿ ಗಟ್ಟಿ ತಳವೂರಿದ ನಂತರ ಅವಳಿಗೆ ಹರೀಶನೊಂದಿಗೆ ಬದುಕು ಅಸಹನೀಯ ಎನ್ನಿಸತೊಡಗಿತು. ತಾನು ಬೇಯಿಸಿಡುವ ಅಡುಗೆಯೊಂದನ್ನು ಹೊರತುಪಡಿಸಿದರೆ ತನ್ನಿರುವಿನ ಅಗತ್ಯ ಅವನಿಗೆ ಇಲ್ಲ. ಎಲ್ಲರ ಸಮ್ಮುಖದಲ್ಲಿ ಮದುವೆಯಾಗಿ ಇಲ್ಲಿಗೆ ಬಂದು ಬೆರಳೆಣಿಕೆಯಷ್ಟು ಬಾರಿ ಹಾಸಿಗೆ ಹಂಚಿಕೊಂಡಿದ್ದು ಹೌದಾದರೂ ಡಿಪೆಂಡೆಂಟ್ ವೀಸಾದ ಲೆಕ್ಕಾಚಾರವನ್ನು ಬಿಟ್ಟರೆ ಹರೀಶ ತನಗೂ ಬೇಕಾಗಿಯೇ ಇಲ್ಲ ಎಂಬ ವಿಚಾರ ಅವಳಿಗೆ ಸ್ಪಷ್ಟವಾಗುತ್ತಹೋಯಿತು.

ಆಫೀಸಿನಲ್ಲಿ ಮಾತನಾಡಿ ಕಂಪನಿಯ ವತಿಯಿಂದ ತನ್ನ ವರ್ಕ್‌ಪರ್ಮಿಟ್ ಫೈಲ್ ಮಾಡುವಂತೆ ವಿನಂತಿಸಿದಳು. ಎರಡೇ ತಿಂಗಳಿನಲ್ಲಿ ವರ್ಕ್‌ಪರ್ಮಿಟ್ ವೀಸಾ ಬಂತು. ಅವಳು ಬೇರೆಯಾಗುವ ವಿಷಯವನ್ನು ಮುಂದಿಟ್ಟಾಗ ಹರೀಶ ಸಿಟ್ಟನ್ನಾಗಲೀ ಆಶ್ಚರ್ಯವನ್ನಾಗಲೀ ತೋರಿಸಲಿಲ್ಲ. 'ನಿನ್ನನ್ನು ಮೊದಲೇ ಅಳೆದಿದ್ದೆ' ಎನ್ನುವಂತೆ ನೋಡಿದ ಅಷ್ಟೆ. ನಂತರ ಗ್ಲಾಸ್ಗೋದ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿತೆಂದು ಮನೆ ಖಾಲಿ ಮಾಡಿದ. ಅಪ್ಪಅಮ್ಮನಿಗೆ ತನಗೆ ಸರಿಕಂಡ ಧಾಟಿಯಲ್ಲಿ ನಡೆದದ್ದುನ್ನು ಹೇಳಿ ಸುಮ್ಮನಾದಳು. ಅವನ ಧಾಟಿಯಲ್ಲಿ ಅವನೂ ತನ್ನವರಿಗೆ ಹೇಳಿರಬಹುದಾದುದನ್ನ ಊಹಿಸಿ ತಣ್ಣಗಾದಳು.

* * *

ನೀಲ್ ಮತ್ತೂ ತಾನು ಹತ್ತಿರಾಗುವುದಕ್ಕೆ ತಮ್ಮಿಬ್ಬರ ವೈಯಕ್ತಿಕ ಯಾತನೆಯೇ ಕಾರಣ ಎಂಬುದು ಜ್ಯೋತ್ಸ್ನಾಳ ಬಲವಾದ ನಂಬಿಕೆ.

ನೀಲ್‌ನ ಕಂಪನಿಯಲ್ಲಿ ಅವಳು ಕೆಲಸ ಶುರು ಮಾಡಿದ ಹೊಸತರಲ್ಲಿ ತನ್ನ ಬಹುಕಾಲದ ಗೆಳತಿ ಏವಾಳನ್ನು ನೀಲ್ ಮದುವೆಯಾಗಿದ್ದ. ಸೆಂಟ್ರಲ್ ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುವ ಏವಾ ಪ್ರತಿ ಶುಕ್ರವಾರ